ಆ) ಈ ಮೇಲಿನ ಪ್ರಕರಣಗಳ ಖಾತೆಯ ಬದಲಾವಣೆಯಲ್ಲಿ ಕಾನೂನು ಮತ್ತು ನಿಯಮಗಳನ್ನು ಅನುಸರಿಸಲಾಗಿದೆಯೇ ?

ಶ್ರೀ ಕೆ. ಹೆಚ್. ಪಾಟೀಲ್ (ಕಂದಾಯ ಮತ್ತು ಕಾರ್ಮಿಕ ಸಚಿವರು).—

ಅ) ೧-೧-೧೯೯೦ರಿಂದ ಇದುವರೆಗೆ (೨೫-೬-೧೯೯೦) ಪಟ್ಟಣಗರೆ ಪಂಚಾಯ್ತಿಯಲ್ಲಿನ ಪಂತರ ಪಾಳ್ಯ ಗ್ರಾಮದ ಕಂದಾಯ ಭೂಮಿಗೆ ಖಾತೆ ಮಾಡಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲೂ ಅಮಾನತ್ತಿನಲ್ಲಿರುವ ನೌಕರರ ಸಂಖ್ಯೆ

೧೩೧೮. ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಎ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿರುವ ನೌಕರರ ಪೈಕಿ ಕಳೆದ ಹಲವು ವರ್ಷಗಳಲ್ಲಿ ಅಮಾನತ್ತಿನಲ್ಲಿಟ್ಟಿರುವ ನೌಕರರ ಸಂಖ್ಯೆ (ಹೆಸರು, ಹುದ್ದೆ ಹಾಗೂ ದಿನಾಂಕಗಳನ್ನು ನೀಡುವುದು).

ಬಿ) ಅವರಲ್ಲಿ ಎಷ್ಟು ಜನ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಕ್ಕೆ ಸೇರಿದವರಿದ್ದಾರೆ ?

ಸಿ) ಅಮಾನತ್ತಿನಲ್ಲಿಟ್ಟಿರುವುದಕ್ಕೆ ಕಾರಣಗಳೇನು ? (ವಿವರಗಳನ್ನು ನೀಡುವುದು).

ಡಿ) ಅಮಾನತ್ತಿನಲ್ಲಿರುವ ನೌಕರರು ೬ ತಿಂಗಳಿಗಿಂತ ಹೆಚ್ಚಿನ ಅವಧಿ ಮೀರಿರುವರೇ ?

ಇ) ಹಾಗಿದ್ದಲ್ಲಿ, ಅವರ ಅಮಾನತ್ತನ್ನು ರದ್ದುಗೊಳಿಸಿ ಪುನಃ ಕೆಲಸಕ್ಕೆ ತೆಗೆದುಕೊಳ್ಳದೇ ಇರುವುದಕ್ಕೆ ಕಾರಣವೇನು ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—

ಎ) ಹತ್ತು ಮಂದಿ ನೌಕರರು. (ಪಟ್ಟಿಯನ್ನು ಲಗತ್ತಿಸಲಾಗಿದೆ) (ಅನುಬಂಧ—೧)

ಬಿ) ಐದು ನೌಕರರು ಪರಿಶಿಷ್ಟ ಜಾತಿಗೆ ಸೇರಿದ್ದಾರೆ.

ಸಿ) ವಿವರಗಳನ್ನು ಅನುಬಂಧ—೨ರಲ್ಲಿ ನೀಡಲಾಗಿದೆ.

ಡಿ) ಆರು ಮಂದಿ ನೌಕರರು ೬ ತಿಂಗಳ ಅವಧಿ ಮೀರಿ ಅಮಾನತ್ತಿನಲ್ಲಿದ್ದಾರೆ.

ಇ) ನೀತಿಗೆಟ್ಟ ನಡವಳಿಕೆ, ಲಂಚಗುಳಿತನದಂತಹ ಗುರುತರವಾದ ಅಪಾದನೆಗಳನ್ನು ಸದರಿ ನೌಕರರು ಎದುರಿಸುತ್ತಿರುವುದರಿಂದ ಪುನಃ ಕೆಲಸಕ್ಕೆ ತೆಗೆದುಕೊಂಡಿಲ್ಲ.

"ANNEXURE—1"

LIST OF OFFICIALS SUSPENDED

Sl. No.	Name of the officials		Date of Suspension
	Sriyuths :		
1	G. K. Krishna Murthy, Suptd.	...	12-2-1990
2	K. J. Ninge Gowda, FDA.	...	12-2-1990
3	K. Nagabhushana, SDA.	...	12-2-1990
4	G. Muniyappa, SDA.	...	24-2-1990
5	Krishnappa, peon.	...	17-1-1989
6	B. Raju, SDA.	...	17-6-1989
7	R. Venkataramana, FDA.	...	17-9-1989
8	Kariyappa, Sweeper.	...	10-7-1986
9	Muniraju, Sweeper.	...	10-7-1986
10	C. Muniyappa, Peon.	...	10-7-1986

"ANNEXURE—2"

The details of reason for the Suspension of officials

Out of the above said officlais Sl. No. 1 to 3 are under suspension for assesing non-existant buildings with a view to enable re-sale of vacant sites.

Sl. No. 4 was trapped by the Lokayukta on 1-2-1990 on a complaint lodged by one Sri Amanulla Sheriff demanding bribe for issue of Katha Certificate.

Sl. No. 5 is involved in a cheating case promising the individuals that he would get the BDA sites to them.

Sl. No. 6 mis-behaved with a Lady visitor to the BDA office and made indecent suggestions to her in connection with execution of L.C.S.A. for a site.

Sl. No. 7 has forged the signature and seal of the Deputy Commissioner (LA), BDA and issued L.C.S.A. in respect of B.D.A. property which was registered on 1'-8-1989 with a view to sell off BDA property illegally.

Sl. Nos. 8 to 10 were involved in cheating cases involving issue of bogus possession certificates and police unearthed the gang and they have been charge-sheeted. These three official are facing criminal charges.

ಬೆಂಗಳೂರು ನಗರದಲ್ಲಿ ದಿನವಹಿ ಸಂಚಾರ ನಿಯಮಗಳನ್ನು ಉಲ್ಲಂಘಿಸಿರುವ ಪ್ರಕರಣಗಳ ಮೊಕದ್ದಮೆಗಳ ಸಂಖ್ಯೆ

೧೩೮. ಶ್ರೀ ಎ. ಕೆ. ಆನಂತಕೃಷ್ಣ (ಶಿವಾನಜಿಗರ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಬೆಂಗಳೂರು ನಗರದಲ್ಲಿ ದಿನವಹಿ ಸಂಚಾರಿ ನಿಯಮಗಳನ್ನು ಉಲ್ಲಂಘಿಸುವುದಿಲ್ಲ, ತರಹದ ವಾಹನಗಳ (ದ್ವಿಚಕ್ರ ವಾಹನಗಳು ಹಾಗೂ ಲಾರಿಗಳು (ಮೇಲೆ ಹಾಕಿರುವ ಮೊಕದ್ದಮೆಗಳ ಸಂಖ್ಯೆ) ಎಷ್ಟು ?

(ಆ) ಸಂಚಾರಿ ನಿಯಮಗಳನ್ನು ಉಲ್ಲಂಘಿಸುವ ವಾಹನ ಚಾಲಕರ ಉಪಯೋಗಕ್ಕಾಗಿ ಸರ್ಕಾರವು ತಿಳುವಳಿಕೆಯನ್ನು ಕೊಡುವ ಬಗ್ಗೆ ಯಾವುದರೂ ಮಾರ್ಗದರ್ಶನ ಪ್ರಕಟಣೆಯನ್ನು ಪ್ರಚಾರ ಪಡಿಸಲಾಗುವುದೆ ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).—

(ಅ) ವಿವಿಧ ರೀತಿಯ ವಾಹನಗಳ ಮೇಲೆ ಸರಾಸರಿ ಒಂದು ದಿನದಲ್ಲಿ ಹಾಕಿರುವ ಮೊಕದ್ದಮೆಗಳು—೨೭೨

(ಆ) ಹೌದು.